**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 98/2023**

**ಸಿಡಬ್ಲ್ಯೂ-1 ಪಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ದಿವ್ಯಶ್ರೀ |
| ಗಂಡನ ಹೆಸರು | : | ಹರೀಶ್ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಖಾಸಗಿ ಉದ್ಯೋಗ |
| ವಾಸಸ್ಥಳ | : | ಆಲೂರು ಗ್ರಾಮ. |

**ಸಾಕ್ಷಿಗೆ ದಿನಾಂಕಃ 18.06.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಪರ ಮಾನ್ಯ ಎಪಿಪಿ ರವರಿಂದಃ**

1 ನೇ ಆರೋಪಿಯು ನನಗೆ ಗಂಡನಾಗಬೇಕು. 2 ಮತ್ತು 3 ನೇ ಆರೋಪಿಗಳು ಅತ್ತೆ ಮತ್ತು ಮಾವನಾಗಬೇಕು. ದಿ.04.04.2021 ರಂದು ನನ್ನ ಮತ್ತು 1 ನೇ ಆರೋಪಿಯ ಮದುವೆ ಹಾಸನ ಜಿಲ್ಲೆ , ಆಲೂರು ತಾಲ್ಲೂಕಿನ ಶಾಂಭವಿ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಎಂಗೇಜ್ ಮೆಂಟ್ ಸಮಯದಲ್ಲಿ 1 ನೇ ಆರೋಪಿಗೆ ಐವತ್ತು ಸಾವಿರ ರೂ.ಗಳನ್ನು ಹಾಗೂ ಮದುವೆಯ ಸಮಯದಲ್ಲಿ ನಾಲ್ಕು ಲಕ್ಷ ರೂ.ಗಳನ್ನುನಾನು ನ್ನನ ಖಾತೆಯ ಮೂಲಕ ಹಾಗೂ ನಮ್ಮ ತಂದೆಯ ಖಾತೆಯ ಮೂಲಕ 1 ನೇ ಆರೋಪಿಗೆ ಕಳುಹಿಸಿರುತ್ತೇನೆ ಹಾಗೂ 7 ½ ಗ್ರಾಂ ಚಿನ್ನದ ಉಂಗುರ ಮತ್ತು 15 ಗ್ರಾಂ ಚಿನ್ನವನ್ನು 1 ನೇ ಆರೋಪಿಗೆ ನೀಡಿರುತ್ತೇವೆ. ಮದುವೆ ಆದ ಮೇಲೆ ಆರೋಪಿಗಳ ಮನೆಗೆ ಹೋಗಿದ್ದು, ಅಲ್ಲಿ ಒಂದು ವಾರಗಳ ಕಾಲ ಅನ್ಯೋನ್ಯವಾಗಿದ್ದೆವು. ಅವರ ಮನೆಯಲ್ಲಿ ಅನುಕೂಲ ಇಲ್ಲದ ಕಾರಣ 1 ನೇ ಆರೋಪಿಯು ತಾನು ಬೆಂಗಳೂರಿನಲ್ಲಿ ಮನೆ ಮಾಡುವುದಾಗಿ ನನ್ನನ್ನು ನನ್ನ ತವರುಮನೆಗೆ ಕಳುಹಿಸಿರುತ್ತಾರೆ.

ನಂತರ 1 ನೇ ಆರೋಪಿಯು ತನ್ನ ಮೊಬೈಲ್ ನ್ನು ಬ್ಲಾಕ್ ಮಾಡಿಕೊಂಡಿದ್ದು, ನಂತರ ನಾನು ದಿ.01.07.2021 ರಂದು ನಾನು ಮತ್ತು ನಮ್ಮ ತಂದೆ ತಾಯಿ, ಅತ್ತಿಗೆ, ಆರೋಪಿಗಳ ಊರಿನ ಯಜಮಾನರುಗಳು ಸೇರಿ ಪಂಚಾಯಿತಿ ಮಾಡಿರುತ್ತಾರೆ. ಆಗ 1 ನೇ ಆರೋಪಿಯು ನನಗೆ ಹೊಡೆದು ನನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ ಮತ್ತು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ನಂತರ ದಿ.09.09.2021 ರಂದು 1 ನೇ ಆರೋಪಿಯು ನನ್ನನ್ನು ಅವರ ಮನೆಗೆ ಕರೆದಿದ್ದು, ಅಲ್ಲಿಗೆ

ಹೋದಾಗ ಅವರುಗಳೆಲ್ಲರೂ ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡಿದ್ದು, 1 ನೇ ಆರೋಪಿಯು ಹತ್ತು ಲಕ್ಷ ರೂ.ಗಳನ್ನು ವರದಕ್ಷಿಣೆಯಾಗಿ ತರುವಂತೆ ಹಾಗೂ ನನ್ನ ಒಡವೆಗಳನ್ನು ಕೊಡುವಂತೆ ಕೇಳಿರುತ್ತಾರೆ. ಇದಾದ ನಂತರ ನಾವುಗಳು ತಲಕಾಡು ಪೋಲಿಸ್ ಠಾಣೆಗೆ ದೂರು ಸಲ್ಲಿಸಿರುತ್ತೇವೆ. ಅವರು ರಾಜಿ ಸಂದಾನ ಮಾಡಿ ನನ್ನನ್ನು ಆರೋಪಿಗಳ ಮನೆಗೆ ಕಳುಹಿಸಿರುತ್ತಾರೆ. ನಂತರ 1 ನೇ ಆರೋಪಿಯು ನನ್ನನ್ನು ಕಂಪ್ಯೂಟರ್ ಕಲಿತುಕೊಂಡು ಬರುವಂತೆ ತಿಳಿಸಿ ತವರುಮನೆಗೆ ಬಿಟ್ಟಿದ್ದು, ತನ್ನ ಮೊಬೈಲನ್ನು ಬ್ಲಾಕ್ ಮಾಡಿಕೊಂಡಿರುತ್ತಾರೆ. ದಿ.26.06.2022 ರಂದು ಆರೋಪಿಗಳ ವಿರುದ್ಧ ದೂರು ಸಲ್ಲಿಸಿದಾಗ ಅವರುಗಳು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ದಿ.26.07.2022 ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ದಿ.01.08.2022 ರಂದು ಪೋಲಿಸರು ಸ್ಥಳ ಮಹಜರ್ ಗಾಗಿ ಬಂದಿರುತ್ತಾರೆ. ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರ್ ಸಮಯದಲ್ಲಿ ಚಾಸಾ.11 ಮತ್ತು 12 ರವರು ಹಾಜರಿದ್ದು, ಪೋಲಿಸರು ನನ್ನ ಮದುವೆಗೆ ಸಂಬಂಧಿಸಿದ ಫೋಟೋ ಮತ್ತು ಮದುವೆಯ ಆಮಂತ್ರಣ ಪತ್ರಿಕೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ನ್ನು 4.00 ರಿಂದ 5.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. 2 ಮತ್ತು 3 ನೇ ಆರೋಒಪಿಗಳು 1 ನೇ ಆರೋಪಿಗೆ ಕುಮ್ಮಕ್ಕು ನೀಡಿರುತ್ತಾರೆ ಮತ್ತು ಬೇರೆ ಮದುವೆ ಆಗಲು ಹೇಳಿರುತ್ತಾರೆ. ಆರೋಪಿಗಳು ಗೈರುಹಾಜರಿರುತ್ತಾರೆ ಮತ್ತು ಅವರುಗಳನ್ನು ಗುರುತಿಸಲು ತೊಂದರೆ ಇರುವುದಿಲ್ಲ.

ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. 9 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.3 ಎಂದು ಗುರುತಿಸಲಾಯಿತು. ಡಿ.ವಿ.ಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಮದುವೆಯ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು.

**(ಎಪಿಪಿ ರವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**